**ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು ಹಾಗೂ ಜೆ.ಎಂ.ಎಫ್.ಸಿ. ಇವರ ನ್ಯಾಯಾಲಯ, ಮುಧೋಳ**

**ಸಾಕ್ಷಿಗೆ ಇಂದು ದಿನಾಂಕ 04.06.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ 1 ರಿಂದ 7 ರವರ ಪರ ಶ್ರೀ ಹೆಚ್ ಎ ಕೆ ವಕೀಲರಿಂದ :**

ಬಾಳಪ್ಪ ಮತ್ತು ಸುಶೀಲಾಬಾಯಿ ನನಗೆ ಅಜ್ಜ ಅಜ್ಜಿ ಆಗಬೇಕು. ಅವರು ಈಗ ಮೃತ ಪಟ್ಟಿರುವರು. ಇವರಿಗೆ ಪ್ರತಿವಾದಿ 1 ರಿಂದ 4, ಮೃತ ವಿಜಯಕುಮಾರ ಹಾಗೂ ಮೃತ ಮೀನಾಕ್ಷಿ ಎಂಬ ಮಕ್ಕಳು ಇದ್ದರು ಎಂದರೆ ಸರಿ. ವಿಜಯಕುಮಾರ ವಿವಾಹ ಆಗದೆ ಮೃತ ಪಟ್ಟಿರುವರು ಎಂದರೆ ಸರಿ. ಪ್ರತಿವಾದಿ 8 ಮತ್ತು 9 ರವರು ನಮ್ಮ ಮನೆತನಕ್ಕೆ ಮತ್ತು ದಾವಾ ಆಸ್ತಿಗಳಿಗೆ ಯಾವುದೇ ರೀತಿಯ ಸಂಬಂಧ ಇರುವುದಿಲ್ಲ ಎಂದರೆ ಸರಿ. ನನ್ನ ತಂದೆ ನಿಂಗರಾಜು ಮೃತ ಪಟ್ಟಿರುವರು ಎಂದರೆ ಸರಿ.

2. 1985 ಕ್ಕಿಂತ ಮುಂಚೆ ನನ್ನ ಅಜ್ಜ ಬಾಳಪ್ಪ ಆತನ ಸಹೋದರಿಂದ ಪ್ರತ್ಯೇಕವಾಗಿ ವಿಭಾಗ ಮಾಡಿಕೊಂಡು ವಾಸಿಸುತ್ತಿದ್ದನು ಎಂದರೆ ಸರಿಯಲ್ಲ. ಇವರು ಬೆಳಗಲಿಯ ಪಿ ಕೆ ಬಿ ಯ ಸೊಸೈಟಿಯಲ್ಲಿ ಕಾರ್ಕೂನ ಅಂತ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಇವರು 1985 ಕ್ಕಿಂತ ಪೂರ್ವದಿಂದಲೂ ಅಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಪ್ರತಿವಾದಿ 2 ರಿಂದ 4 ರವರು ಇವರ ತಂದೆಯಿಂದ ತಾಯಿಯೊಂದಿಗೆ ಪ್ರತ್ಯೇಕವಾಗಿ ವಾಸಿಸುತ್ತಿದ್ದರು ಎಂದರೆ ಸರಿಯಲ್ಲ, ಎಲ್ಲರೂ ಕೂಡಿಯೇ ವಾಸವಾಗಿರುವರು ಎಂದು ಸಾಕ್ಷಿ ಉತ್ತರಿಸುವರು. ಪ್ರತಿವಾದಿ 2 ರಿಂದ 4 ರವರು ಬೇರೆ ಜನರಿಂದ ಹಾಲನ್ನು ಖರೀದಿ ಮಾಡಿ ವ್ಯಾಪಾರ ಮಾಡುತ್ತಿದ್ದರು ಎಂದರೆ ಸರಿ.

3. 1985 ರಲ್ಲಿ ಪ್ರತಿವಾದಿ 2 ರಿಂದ 4 ರವರು ಸರ್ವೇ ನಂಬರ್ 308/2 ರ ಪೈಕಿ ಪ್ರತ್ಯೇಕವಾದ 3 ಖರೀದಿ ಪತ್ರಗಳ ಪ್ರಕಾರ 2 ಎಕರೆ 4 ಗುಂಟೆ ಜಮೀನನ್ನು ಖರೀದಿ ಮಾಡಿರುವರು ಎಂದು ಸಾಕ್ಷಿ ಎಲ್ಲರೂ ಕೂಡಿಯೇ ವಾಸ ಮಾಡುವಾಗ ಖರೀದಿ ಮಾಡಿರುವರು ಎನ್ನುತ್ತಾರೆ. ಆ ಖರೀದಿ ಮಾಡಿದ ಪ್ರಕಾರ ಆ ಖರೀದಿದಾರರ ಹೆಸರು ಪಹಣಿ ಪತ್ರಿಕೆ ದಾಖಲು ಆಗಿರುವವು ಎಂದರೆ ಸರಿ, ಆದರೆ ಎಲ್ಲರೂ ಕೂಡಿಯೇ ಆ ಜಮೀನುಗಳನ್ನು ಖರೀದಿ ಮಾಡಿದ್ದೇವೆ ಎಂದು ಸಾಕ್ಷಿ ಉತ್ತರಿಸುವರು. ಕಂದಾಯ ಅಧಿಕಾರಿಗಳು ಈ 3/ ಸರ್ವೇ ನಂಬರ್ 308/4 , 308/10 ಹಾಗೂ 308/11 ಅಂತ ಮೂರು ಪ್ರತ್ಯೇಕವಾಗಿ ಹೆಸರುಗಳನ್ನು ದಾಖಲು ಮಾಡಿರುವರು ಎಂದರೆ ಸರಿ. 1985 ರಲ್ಲಿ ನನಗೆ ಸುಮಾರು 3-4 ವರ್ಷ ಆಗಿತ್ತು. ಈ ಜಮೀನುಗಳನ್ನು ಖರೀದಿ ಮಾಡುವ ವಿಷಯ ನನ್ನ ತಂದೆಗೆ ಗೊತ್ತಿತ್ತು ಎಂದರೆ ಸರಿ. ಈ 3 ಜಮೀನುಗಳಿಗೆ ನನ್ನ ತಂದೆ ತನ್ನ ಹೆಸರನ್ನು ಖರೀದಿದಾರರ ಜೊತೆ ದಾಖಲು ಮಾಡಲು ಅರ್ಜಿ ಸಲ್ಲಿಸಿರುವುದಿಲ್ಲ, ಏಕೆಂದರೆ ನನ್ನ ಅಜ್ಜ ನನ್ನ ತಂದೆಗೆ ಬೇರೆ ಆಸ್ತಿಗಳನ್ನು ನೀಡುವುದಾಗಿ ಎಂದು ಹೇಳಿರುವುರಿಂದ.

4. ನನ್ನ ತಂದೆ 2015 ರಲ್ಲಿ ಮೃತ ಪಟ್ಟಿರುವರು. ನನ್ನ ತಂದೆ ಮೃತ ಪಡುವ ವರೆಗೂ ಈ ಕುಟುಂಬದ ಆಸ್ತಿಗಳಲ್ಲಿ ನನ್ನದು ಪಾಲು ಇರುವುದು ಎಂದು ಸಿವಿಲ್ ನ್ಯಾಯಾಲಯದಲ್ಲಿ ದಾವೆಯಾಗಲೀ, ಕಂದಾಯ ಇಲಾಖೆಯಲ್ಲಿ ಅರ್ಜಿ ಸಲ್ಲಿಸಿಲ್ಲ ಎಂದರೆ ಸರಿ. ಬೆಳಗಲಿ ಗ್ರಾಮದ ಭಾಗವ್ವ ದನವಾಡ್ ಇವರಿಗೆ ಮಕ್ಕಳು ಇರಲಿಲ್ಲ ಎಂದರೆ ಸಾಕ್ಷಿಯು ತನಗೆ ಮಾಹಿತಿ ಇಲ್ಲ ಎಂದು ಉತ್ತರಿಸಿರುತ್ತಾರೆ. ಈ ಕಾರಣಕ್ಕಾಗಿ ಭಾಗವ್ವ ನನ್ನ ತಂದೆಯನ್ನು ಕರೆದುಕೊಂಡು ಜೋಪಾನ ಮಾಡಿರುವಳು ಎಂದರೆ ಸರಿಯಲ್ಲ, ನನ್ನ ತಂದೆಯನ್ನು ಅವಳ ಹತ್ತಿರ ನನ್ನ ಅಜ್ಜ ಕೆಲಸಕ್ಕೆ ಇಟ್ಟು ಬಂದಿರುವನು. ನನ್ನ ತಂದೆ ಭಾಗವ್ವ ದನವಾಡ್ ಹತ್ತಿರ ಇರುತ್ತಿದ್ದನು ಎಂದರೆ ಸರಿಯಲ್ಲ. ತೋಟದಲ್ಲಿ ವಾಸವಾಗಿರುತ್ತಿದ್ದನು ಎನ್ನುತ್ತಾರೆ. ಭಾಗವ್ವಳೇ ನನ್ನ ತಂದೆಯ ವಿವಾಹನ ಮಾಡಿರುವಳು ಎಂದರೆ ಸರಿಯಲ್ಲ, ನನ್ನ ಅಜ್ಜ ಮಾಡಿರುವನು. ಬೆಳಗಲಿ ಗ್ರಾಮದಲ್ಲಿ ನನ್ನ ತಂದೆಯ ಹೆಸರಿನಲ್ಲಿ 283 ಮತ್ತು 284 ರ ಮನೆಗಳು ಇರುವವು ಎಂದರೆ ಸರಿ. ಇವುಗಳನ್ನು ಈ ದಾವಾ ಆಸ್ತಿಯಲ್ಲಿ ಸೇರ್ಪಡೆ ಮಾಡಿಲ್ಲ

ಎಂದರೆ ಸರಿ. ನನ್ನ ಅಜ್ಜ ಮತ್ತು ಆತನ ಸಹೋದರರ ನಡುವೆ 2002-03 ರಲ್ಲಿ ಮನೆತನದ ಆಸ್ತಿಗಳಲ್ಲಿ ವಾಟ್ನಿ ಮಾಡಿಕೊಂಡಿರುವರು ಎಂದರೆ ಸರಿ. ಆ ವಾಟ್ನಿ ಪತ್ರದಲ್ಲಿ ಈ ದಾವೆಯ ಷೆಡ್ಯೂಲ್ ಬಿ ದ ಆಸ್ತಿ ಕ್ರಮ ನಂ. 2 ರಿಂದ 4 ನ್ನು ಸೇರ್ಪಡೆ ಮಾಡಿರಲಿಲ್ಲ ಎಂದರೆ ಸಾಕ್ಷಿ ನುಡಿಯುವುದೇನೆಂದರೆ ಅಕ್ಕಿಮರಡಿ ಗ್ರಾಮದಲ್ಲಿ 11 ಎಕರೆಯ ಜಮೀನು ಇದ್ದು, ಆ ಜಮೀನಿನಲ್ಲಿ ನನ್ನ ಅಜ್ಜ ಪಾಲು ಪಡೆದಿರುವುದಿಲ್ಲ ಅದರ ಹಿಸ್ಸೆಗಾಗಿ ಸರ್ವೇ ನಂಬರ್ 308/4, 308/10 ಹಾಗೂ 308/11 ರ ಜಮೀನುಗಳನ್ನು ಬಿಟ್ಟುಕೊಟ್ಟಿರುವರು. ಈ ರೀತಿಯಾದ ದಾಖಲೆಗಳನ್ನು ಈ ದಾವೆ ದಾಖಲು ಮಾಡುವ ಸಮಯದಲ್ಲಿ ಹಾಜರು ಪಡಿಸಿರುವುದಿಲ್ಲ. ಈ ಮೂರು ಆಸ್ತಿಗಳು ಪ್ರತಿವಾದಿ 2 ರಿಂದ 4 ರವರ ಸ್ವಯಾರ್ಜಿತ ಆಸ್ತಿ ಆದ್ದರಿಂದ ಆ ಕಾರಣಕ್ಕಾಗಿ 2002-03 ರ ಪಾಲು ವಾಟ್ನಿಯಲ್ಲಿ ಸೇರ್ಪಡೆ ಮಾಡಿಲ್ಲ ಎಂದರೆ ಸರಿಯಲ್ಲ.

5. ನನ್ನ ತಂದೆ ಮತ್ತು ನನ್ನ ಅಜ್ಜ ಮೃತ ಪಟ್ಟ ನಂತರ ಸರ್ವೇ ನಂಬರ್ 298/3 ಬ ಆಸ್ತಿಯಲ್ಲಿ ನಾವೆಲ್ಲರೂ ವಾಟ್ನಿ ಮಾಡಿಕೊಂಡು ಪ್ರತ್ಯೇಕವಾದ ಕಬ್ಜೆ ಹೊಂದಿದ್ದೇವೆ ಎಂದರೆ ಸರಿಯಲ್ಲ. ಈ ಆಸ್ತಿ ಮಾತ್ರ ಪೂರ್ವಜರ ಆಸ್ತಿ ಆಗಿದ್ದು ಉಳಿದ ದಾವಾ ಆಸ್ತಿ ಕ್ರಮ ನಂ. 2 ರಿಂದ 4 ರಲ್ಲಿ ಯಾವುದೇ ಪಾಲು ವಿಭಾಗ ಇರುವುದಿಲ್ಲ ಎಂದರೆ ಸರಿಯಲ್ಲ. ಈ ಆಸ್ತಿಗಳು ಪ್ರತಿವಾದಿ 2 ರಿಂದ 4 ರವರ ಸ್ವಯಾರ್ಜಿತ ಆಸ್ತಿಗಳು ಇರುವುದರಿಂದ ಅವುಗಳಲ್ಲಿ ಪಾಲು ವಿಭಾಗ ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ 2 ರವರು ಸರ್ವೇ ನಂಬರ್ 308/11 ರ ಜಮೀನನ್ನು ತನ್ನ ಹೆಂಡತಿಯ ಹೆಸರಿನಲ್ಲಿ ಬಕ್ಷಿಸ್ ಮಾಡಿಕೊಟ್ಟಿರುವರು ಎಂದರೆ ಸರಿ. ನಮಗೆ ಆ ಆಸ್ತಿಯಲ್ಲಿ ಪಾಲು ನೀಡಬಾರದು ಎಂಬ ಕಾರಣಕ್ಕೆ ಈ ರೀತಿಯಾದ ದಾಖಲೆ ಸೃಷ್ಟಿ ಮಾಡಿಕೊಂಡಿರುವನು. ಆ ಬಕ್ಷಿಸ್ ಪತ್ರದ ಪ್ರಕಾರ ಆತನ ಹೆಂಡತಿಯ ಹೆಸರು ಈ ಜಮೀನಿಗೆ ದಾಖಲು ಆಗಿದೆ ಎಂದರೆ ಸರಿ. ಪ್ರತಿವಾದಿ 3 ತನ್ನ ಹೆಸರಿನಲ್ಲಿ ಇರುವ ಜಮೀನನ್ನು ಆತನ ಮಗನಾದ ಸಾಗರನ ಹೆಸರಿನಲ್ಲಿ ಬಕ್ಷಿಸ್ ಪತ್ರ ಮಾಡಿಕೊಟ್ಟಿದ್ದು ಆ ಪ್ರಕಾರ ಆತನ ಹೆಸರು ದಾಖಲು ಆಗಿದೆ ಎಂದರೆ ಸರಿ. ಪ್ರತಿವಾದಿ 4 ರವರು ತನ್ನ ಹೆಸರಿನ ಆಸ್ತಿಯನ್ನು ಅನಿತಾ ಸಾಯಿಬಾಬ್ ಸಿದ್ದಾಪುರ ಇವಳ ಹೆಸರಿನಲ್ಲಿ ಬಕ್ಷಿಸ್ ಪತ್ರ

ಮಾಡಿಕೊಟ್ಟಿರುವರು ಎಂದರೆ ಸರಿ. ಈ ಬಕ್ಷಿಸ್ ಪತ್ರಗಳ ಮೇರೆಗೆ ಕಂದಾಯ ಇಲಾಖೆಯಲ್ಲಿ ಹಕ್ಕು ಬದಲಾವಣೆ ಮಾಡುವ ಸಮಯದಲ್ಲಿ ತಕರಾರು ಸಲ್ಲಿಸಿದ್ದೇವೆ ಎಂದರೆ ಸರಿ. ಆಗ ಆರ್ ಟಿ ಎಸ್ ಪ್ರಕರಣವಾಗಿದ್ದು ಹಾಗೂ ಉಪವಿಭಾಗಾಧಿಕಾರಿಗಳ ಆದೇಶದ ಮೇರೆಗೆ ಹಕ್ಕು ಬದಲಾವಣೆ ಆಗಿದೆ ಎಂದರೆ ಸರಿ. ಸರ್ವೇ ನಂಬರ್ 298/3 ಬ ಈ ಆಸ್ತಿಯನ್ನು ಹೊರತು ಪಡಿಸಿ ಉಳಿದ ಆಸ್ತಿಗಳಲ್ಲಿ ನಮಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯಾವಕಾಶ ಕೋರುತ್ತಾರೆ, ಪ್ರಕರಣವನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )

ಓ . ಹೇ. ಕೆ . ಸರಿ ಅದೆ .

VIJAYAKUMAR KANNUR
Digitally signed by VIJAYAKUMAR KANNUR
Date: 2025.06.05 10:37:25 +0530

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ